ದಿನಾಂಕಃ- 11.09.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

5. ಈ ಸಾಕ್ಷಿ ಕಡತದಲ್ಲಿರುವ 20 ಫೋಟೋಗಳನ್ನು ಲೋಕಾಯುಕ್ತ ಕಛೇರಿಯಲ್ಲಿ ತಾನು, ಲೋಕೇಶ, ಹನುಮಂತಪ್ಪ, ಜಗದೀಶ, ದಿನೇಶ ಮತ್ತು ಲೋಕಾಯುಕ್ತ ಪೊಲೀಸರು ವಹಿಸುವಿಕೆ ಮಹಜರು ತಯಾರಿಸುವಾಗ ತೆಗೆದಿರುವ ಫೋಟೋಗಳು ಎಂದು ಮತ್ತು ಸದರಿ ಫೋಟೋಗಳಲ್ಲಿ ಲೋಕಾಯುಕ್ತ ಕಛೇರಿ, ತಾನು, ಲೊಕೇಶ, ಹನುಮಂತಪ್ಪ, ಜಗದೀಶ, ದಿನೇಶ ಮತ್ತು ಲೋಕಾಯುಕ್ತ ಪೊಲೀಸರು ಕಾಣಿಸುತ್ತಿರುವುದಾಗಿ ಹೇಳಿದ್ದಾರೆ ಮತ್ತು ಗುರುತಿಸಿದ್ದಾರೆ. ಸದರಿ ಫೋಟೋಗಳನ್ನು ನಿಪಿ-4 ರಿಂದ ನಿಪಿ-23 ರವರೆಗೆ ಗುರುತಿಸಲಾಯಿತು.

6. ಲೋಕಾಯುಕ್ತ ಕಛೇರಿಯಲ್ಲಿ ವಹಿಸುವಿಕೆ ಮಹಜರು ಪ್ರಕ್ರಿಯೆ ಮುಗಿದ ನಂತರ ಲೋಕಾಯುಕ್ತ ಪೊಲೀಸರು ಮತ್ತು ನಾವೆಲ್ಲರೂ ಊಟ ಮಾಡಿ ಮದ್ದೂರಿಗೆ ಹೋದೆವು. ನಾನು, ಲೋಕಾಯುಕ್ತ ಪೊಲೀಸರು, ಲೋಕೇಶ, ಹನುಮಂತಪ್ಪ, ಜಗದೀಶ, ದಿನೇಶ ಮದ್ದೂರಿನಲ್ಲಿರುವ ಆರೋಪಿಯ ಕಛೇರಿಗೆ ಹೋದೆವು. ಆ ಸಮಯದಲ್ಲಿ ಆರೋಪಿಯ ಕಛೇರಿಯಲ್ಲಿರುವ ಆರೋಪಿ ಕೊಠಡಿಯ ಬಾಗಿಲಿಗೆ ಬೀಗ ಹಾಕಿತ್ತು. ಆನಂತರ ಲೋಕೇಶ ರವರ ಮೊಬೈಲಿನಿಂದ ಆರೋಪಿಗೆ ಕರೆ ಮಾಡಿದೆವು. ಆಗ ಆರೋಪಿ ನ್ಯಾಯಾಲಯದ ಹಿಂಭಾಗದ ರಸ್ತೆಯಲ್ಲಿರುವ ಅರಳಿಕಟ್ಟೆಯ ಹತ್ತಿರ ಇರುವ ಅವರ ಖಾಸಗಿ ಕೊಠಡಿಯ ಹತ್ತಿರ ಬರುವಂತೆ ಹೇಳಿದರು. ಆನಂತರ ಮದ್ಯಾಹ್ನ 3.30 ಗಂಟೆಗೆ ಆರೋಪಿ ಅರಳಿಕಟ್ಟೆಯ ಹತ್ತಿರ ಇರುವ ಅವರ ಖಾಸಗಿ ಕೊಠಡಿಗೆ ಬಂದರು. ಆರೋಪಿ ನನಗೆ ಹಣ ತಂದಿರುವೆಯಾ ಎಂದು ಕೇಳಿದನು. ನಾನು ಆರೋಪಿಯ ಕೈಗೆ 10,000/- ರೂ ಹಣವನ್ನು (ಒಂದು ಸಾವಿರ ಮುಖಬೆಲೆಯ ಹತ್ತು ನೋಟುಗಳನ್ನು ಕೊಟ್ಟೆನು). ನಾನು ಆರೋಪಿಯ ಕೈಗೆ ಹಣ ಕೊಟ್ಟ ನಂತರ ನನ್ನ ತಲೆಯನ್ನು ಕೆರೆದು ಲೋಕಾಯುಕ್ತ ಪೊಲೀಸರಿಗೆ ಸೂಚನೆ ಕೊಟ್ಟೆನು.

7. ನಾನು ಸೂಚನೆ ಕುಟ್ಟ ಕೂಡಲೇ ಲೋಕಾಯುಕ್ತ ಪೊಲೀಸರು ನಾನು ಮತ್ತು ಆರೋಪಿ ಇದ್ದ ಸ್ಥಳಕ್ಕೆ ಬಂದು ಆರೋಪಿಯ ಕೈಗಳನ್ನು ಹಿಡಿದುಕೊಂಡರು. ಆ ಸಮಯದಲ್ಲಿ ಆರೋಪಿಯ ಕೈಯಲ್ಲಿ ನಾನು ಕೊಟ್ಟಿದ್ದ ಹಣ ಇತ್ತು.

8. ಲೋಕಾಯುಕ್ತ ಪೊಲೀಸರು ಆರೋಪಿಯ ಕೈಯಲ್ಲಿ ಇದ್ದ 1,000/- ಮುಖಬೆಲೆಯ 10 ನೋಟುಗಳನ್ನು ಪರಿಶೀಲನೆ ಮಾಡಿ ನೋಟುಗಳಲ್ಲಿ ಇದ್ದ ಗುರುತಿನ ನಂಬರುಗಳನ್ನು ಮತ್ತು ಅವರು ಮೊದಲೇ ಚೀಟಿಯಲ್ಲಿ ಬರೆದುಕೊಂಡಿದ್ದ ನೋಟುಗಳು ಗುರುತಿನ ನಂಬರುಗಳನ್ನು ತಾಳೆ ಮಾಡಿ ನೋಡಿದರು. ಪೊಲೀಸರು ಆರೋಪಿಯ ಕೈಗಳಿಂದ ಪಡೆದುಕೊಂಡ 1,000/- ಮುಖಬೆಲೆಯ 10 ನೋಟುಗಳನ್ನು ವಶಪಡಿಸಿಕೊಂಡರು. ನಾನು ಆರೋಪಿಯ ಕೈಗೆ ಕೊಟ್ಟಿದ್ದ 1,000/- ಮುಖಬೆಲೆಯ 10 ನೋಟುಗಳನ್ನು ತೋರಿಸಿದರೆ ಗುರುತಿಸುತ್ತೇನೆ.

9. ಲೋಕಾಯುಕ್ತ ಪೊಲೀಸರು ಈ ನ್ಯಾಯಾಲಯದ ಸ್ವಾಧೀನಕ್ಕೆ ಕೊಟ್ಟಿರುವ ಸೀಲಾಗಿರುವ ಕವರನ್ನು ತೆಗೆದು ಅದರ ಒಳಗೆ ಇದ್ದ 1,000/- ಮುಖಬೆಲೆಯ 10 ನೋಟುಗಳನ್ನು ತೋರಿಸಿದಾಗ ಈ ಸಾಕ್ಷಿ ಸದರಿ ನೋಟುಗಳನ್ನು ತಾನು ಆರೋಪಿಗೆ ಕೊಟ್ಟಿರುವುದಾಗಿ ಗುರುತಿಸಿದ್ದಾರೆ. ಈ ಸಾಕ್ಷಿ ಗುರತಿಸಿರುವ 1,000/- ಮುಖಬೆಲೆಯ 10 ನೋಟುಗಳನ್ನು ಅವುಗಳ ಇದ್ದ ಕವರಿನ ಜೊತೆಯಲ್ಲಿ ಎಂಒ-2 ಎಂದು ಗುರುತಿಸಲಾಯಿತು. (ಎಂಒ-2 ರಲ್ಲಿ ಗುರುತಿಸಿರುವ 1,000/- ಮುಖಬೆಲೆಯ 10 ನೋಟುಗಳು 2016 ಡಿಸೆಂಬರ್ ಗಿಂತ ಹಿಂದಿನ ನೋಟುಗಳಾಗಿರುತ್ತವೆ)

10. ಆನಂತರ ಲೋಕಾಯುಕ್ತ ಪೊಲೀಸರು ಆರೋಪಿಯ ಎರಡು ಕೈಗಳನ್ನು ಧ್ರಾವಣದಿಂದ ತೊಳೆಸಿದರು. ಆ ಸಮಯದಲ್ಲಿ ಆರೋಪಿ ಕೈಗಳು ಗುಲಾಬಿ ಬಣ್ಣಕ್ಕೆ ಬದಲಾದವು. ಆರೋಪಿಯ ಕೈ ತೊಳೆಸಿದ ಧ್ರಾವಣವನ್ನು ಪೊಲೀಸರು 2 ಪ್ರತ್ಯೇಕ ಬಾಟಲುಗಳಿಗೆ ತುಂಬಿ ಸೀಲು ಮಾಡಿದರು. ಈ ಸಾಕ್ಷಿ ನ್ಯಾಯಾಲಯದಲ್ಲಿ 2 ಬಾಟಲಿಗಳಲ್ಲಿ ಹಾಜರು ಪಡಿಸಿರುವ ಗುಲಾಬಿ ಬಣ್ಣದಲ್ಲಿರುವ ಧ್ರಾವಣಗಳನ್ನು ಆರೋಪಿಯ ಕೈ ತೊಳೆ ಧ್ರಾವಣ ಎಂದು

ಗುರುತಿಸಿದ್ದಾರೆ. ಸದರಿ ದ್ರಾವಣಗಳು ಇರುವ 2 ಬಾಟಲಿಗಳನ್ನು ಕ್ರಮವಾಗಿ ಎಂಓ-3 ಮತ್ತು ಎಂಓ-4 ಎಂದು ಗುರುತಿಸಲಾಯಿತು.

11. ಪೊಲೀಸರು ಮೇಲೆ ಹೇಳಿದ ಘಟನೆಗಳು ನಡೆದಾಗ ಫೋಟೋಗಳನ್ನು ತೆಗೆಸಿದ್ದಾರೆ. ಈ ಸಾಕ್ಷಿ ಕಡತದಲ್ಲಿರುವ 10 ಫೋಟೋಗಳನ್ನು ಮೇಲೆ ಹೇಳಿದ ಘಟೆಗಳು ನಡೆದಾಗ ತೆಗೆದ ಫೋಟೋಗಳು ಎಂದು ಮತ್ತು ಫೋಟೋಗಳಲ್ಲಿ ತಾನು, ಲೋಕೇಶ, ಹನುಮಂತಪ್ಪ, ಜಗದೀಶ, ದಿನೇಶ ಮತ್ತು ಲೋಕಾಯುಕ್ತ ಪೊಲೀಸರು ಮತ್ತು ಆರೋಪಿ ಹಾಗೂ ಹಣ ಕಾಣಿಸುತ್ತಿರುವುದಾಗಿ ಹೇಳಿದ್ದಾರೆ ಮತ್ತು ಗುರುತಿಸಿದ್ದಾರೆ. ಸದರಿ 10 ಫೋಟೋಗಳನ್ನು ಕ್ರಮವಾಗಿ ನಿಪಿ.24 ರಿಂದ ನಿಪಿ.33 ರವರೆಗೆ ಗುರುತಿಸಲಾಯಿತು.

12. ನಂತರ ಪೊಲೀಸರು ನನ್ನನ್ನು ಲೋಕೇಶ, ಹನುಮಂತಪ್ಪ, ಜಗದೀಶ, ದಿನೇಶ ಮತ್ತು ಲೋಕಾಯುಕ್ತ ಪೊಲೀಸರು ಮತ್ತು ಆರೋಪಿಯನ್ನು ಜೀಪಿನಲ್ಲಿ ಕೂರಿಸಿಕೊಂಡು ಮಂಡ್ಯ ಲೋಕಾಯುಕ್ತ ಪೊಲೀಸರ ಕಛೇರಿಗೆ ಬಂದರು.

13. ನಂತರ ಪೊಲೀಸರು ಆರೋಪಿಯ ಕಛೇರಿಯಿಂದ ಬಸವಣ್ಣ ಎನ್ನುವವರನ್ನು ಲೊಕಾಯುಕ್ತ ಕಛೇರಿಗೆ ಕರೆಸಿಕೊಂಡರು. ಬಸವಣ್ಣ ನವರಿಗೆ ಆರೋಪಿಯ ಧ್ವನಿ ಅಡಕವಾಗಿದ್ದ ಮುದ್ರಿಕೆಯನ್ನು ಆಲಿಸಿದರು. ಬಸವಣ್ಣ ನವರು ಲೋಕಾಯುಕ್ತ ಪೊಲೀಸರು ಆಲಿಸಿದ ಧ್ವನಿಯನ್ನು ಕೇಳಿ ಸದರಿ ಧ್ವನಿ ಆರೋಪಿಯ ಧ್ವನಿ ಎಂದು ಗುರುತಿಸಿದರು.

14. ಮೇಲೆ ಹೇಳಿದ ಘಟನೆಗಳು ನಡೆದಾಗ ರಾತ್ರಿ 9.30 ಗಂಟೆ ಆಯಿತು. ಲೋಕಾಯುಕ್ತ ಕಛೇರಿಯಲ್ಲಿ ಪೊಲೀಸರು ದಾಖಲೆಯನ್ನು ತಯಾರಿಸಿ ನನ್ನ ಸಹಿ ಮಾಡಿಸಿಕೊಂಡರು. ಈ ಸಾಕ್ಷಿ ಕಡತದಲ್ಲಿರುವ ಟ್ರಾಪ್ ಮಹಜರಿನಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ಟ್ರಾಪ್ ಮಹಜರನ್ನು ನಿಪಿ-34 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು.

15. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಾಕ್ಷರ ಜ್ಯೋತಿ ಯೋಜನೆಯಲ್ಲಿ ಕೇವಲ G.B. ಬೊರೇಗೌಡ ಎಂದು ಸಹಿ ಮಾಡಲು ಕಲಿತಿದ್ದೇನೆ.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಎಂ ಬಿ ಆರ್ ವಕೀಲರಿಂದಃ-

ಶ್ರೀ. ಎಂ ಬಿ ಆರ್ ವಕೀಲರ ವಿನಂತಿಯ ಮೇರೆಗೆ ಮತ್ತು ಸಾಕ್ಷಿಯ ಒಪ್ಪಿಗೆ ಮೇರೆಗೆ 18.09.2025 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.